**ದಿನಾಂಕಃ27.10.2023 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ ಆರ್ ವಕೀಲರಿಂದಃ–**

ನಿಪಿ–15 ರಲ್ಲಿನ ದಾಖಲೆಗಳನ್ನು ಸಾಕ್ಷಿಗೆ ತೋರಿಸಿದ್ದು , ವಾದಿಯ ತಂದೆ ಅದರಲ್ಲಿನ ಸ್ವತ್ತನ್ನು ಬ್ಯಾಂಕಿಗೆ ಆಧಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಪ್ರಕರಣದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು , ಇತರ ಪ್ರತಿವಾದಿಗಳು ಸೇರಿ ಹಾಕಿರುತ್ತೇವೆ. ನಮ್ಮ ಮೂವರನ್ನು ಹೊರತುಪಡಿಸಿ ಮತ್ತಾರು ಲಿಖಿತ ಹೇಳಿಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಹೇಳಿಕೆಯನ್ನು ನಾನು , ಇತರ ಪ್ರತಿವಾದಿಗಳು ಸೇರಿ ಬರೆಸಿರುತ್ತೇವೆ. ನನ್ನ ಅಣ್ಣನಾದ 1 ನೇ ಪ್ರತಿವಾದಿ ಪಿಟ್ಲಾಲಿ ಗ್ರಾಮದಲ್ಲಿ ಸರ್ವೆ ನಂಬರ್ಃ 2 , 6 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದು ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಪಿಟ್ಲಾಲಿ ಗ್ರಾಮದಲ್ಲಿ ಸರ್ವೆ ನಂಬರ್ಃ 2 ರಲ್ಲಿ 3 ಎಕರೆ 28 ಗುಂಟೆ ಜಮೀನು ಮೂಲತಃ ತಳವಾರಿಕೆ ನಿಂಗಪ್ಪ ಅವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ . 1 ನೇ ವಾದಿ ಸದರಿ ಜಮೀನಿನಲ್ಲಿ 1 ಎಕರೆ ಜಮೀನು ಕೊಂಡುಕೊಂಡ ದಿನವೇ , ನಾರಾಯಣ ಗೌಡ ಮತ್ತು ಗೋಪಾಲ ಗೌಡ ಅವರ ಪರವಾಗಿ ಪಿ ಎನ್ ಕರಿಬಸಯ್ಯ ಬಿನ್ ನಿಂಗಪ್ಪ ಅವರು 2 ಎಕರೆ 28 ಗುಂಟೆ ಜಮೀನನ್ನು ನೊಂದಾಯಿತ ಕ್ರಯಾಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನು ಬಿಟ್ಟು ಬರೆಸಿಕೊಂಡಿರಬಹುದು ಎಂದು ನುಡಿಯುತ್ತಾರೆ.

ಮಾರಪ್ಪ ಗೌಂಡರ್ ಕಡೆಯಿಂದ 6 ಗುಂಟೆ ಜಮೀನನ್ನು ಖರೀದಿಸಿರುತ್ತೇವೆ . ಮಾರಪ್ಪ ಗೌಂಡರ್ ಹೆಸರಿನಲ್ಲಿ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕ್ರಯಾ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರಾಜಕೀಯ ಮುಖಂಡನಾಗಿದ್ದು , ಸುಳ್ಳು ಕ್ರಯಾ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಕ್ರಯಾ ಪತ್ರವು ಸುಳ್ಳಿನಿಂದ ಕೂಡಿದ್ದು, ಖಾತೆ ಆಗಿರಲಿಲ್ಲ ಎಂದರೆ ಸಾಕ್ಷಿಯು ಆಗ ತುಂಡು ಭೂಮಿ ಖಾತೆ ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ 6

ಗುಂಟೆ ಜಮೀನಿಗೆ ಹೊಂದಿಕೊಂಡತೆ ಸದರಿ ಸರ್ವೆ ನಂಬರ್ ನಲ್ಲಿ ಪೂ–ಪಃ12 ½ ಗಜ , ಉ–ದಃ33 ಗಜ ವಿಸ್ತೀರ್ಣ ಜಮೀನನ್ನು 1 ನೇ ಪ್ರತಿವಾದಿ ಹಾಗೂ ದೊರೆಸ್ವಾಮಿ ಜಂಟಿಯಾರಿ ಖರೀದಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಎರಡು ಜಾಗಗಳು ಒಂದಕ್ಕೊಂದು ಲಗತ್ತಾಗಿದ್ದು ಸದರಿ ಸರ್ವೆ ನಂಬರ್ ನ ಉತ್ತರಕ್ಕೆ ಹಿರಿಯೂರು – ರಂಗನಾಥ ಪುರ ರಸ್ತೆ ಇರುತ್ತದೆ ಎಂದು ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಕರಿಬಸಣ್ಣ ಅವರಿಂದ ಖರೀದಿಸಿರುತ್ತೇನೆ. ಸದರಿ ಜಮೀನನ್ನು ಕರಿಬಸಣ್ಣ ಅವರಿಂದ ಖರೀದಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯಾ ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಸದರಿ ಕ್ರಯಾ ಪತ್ರವು ಸುಳ್ಳಿನಿಂದ ಕೂಡಿದ್ದು, ಖಾತೆ ಆಗಿರಲಿಲ್ಲ ಎಂದರೆ ಸಾಕ್ಷಿಯು ಆಗ ತುಂಡು ಭೂಮಿ ಖಾತೆ ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ–ಸವಾಲುಃ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,. ಹಿರಿಯೂರು.